‘ಸರ್, ತಪ್ಪಾಗಿದ್ದರೆ ಕ್ಷಮಿಸಿ ಪ್ಲೀಸ್’ ಎಂದು ಮೇಜಿನ ಮೇಲಿದ್ದ ನನ್ನ ಕೈಯನ್ನು ಅದುಮಿ ಹಿಡಿಯಬೇಕೆಂದಿದ್ದರೂ ಹಿಡಿಯಲಾರದೇ ಸುಮ್ಮನೆ ಕುಳಿತಳು. ನಾನು ಕಣ್ಣೊಡೆದು ‘ಹೆದರಿದಿಯೇನು ಸರೋಜಾ, ಧೈರ್ಯ ಇಲ್ಲದ ಮೇಲೆ ಈ ಕೆಲಸ ಯಾಕೆ?’ ಎಂದು ಸಣ್ಣಗೆ ಪ್ರಶ್ನಿಸಿದೆ. ‘ನಿನಗೆ ದಡ ಸೇರುವ ಧೈರ್ಯ ಇದ್ದರೆ ಮಾತ್ರ ಮುಂದುವರೆಸು. ಇಲ್ಲವಾದರೆ ಇಲ್ಲಿಗೇ ನಿಲ್ಲಿಸಿಬಿಡು’ ಎಂದೆ.

ಇವಳು ‘ನಿಲ್ಲಿಸುವ ಪ್ರಶ್ನೆಯೇ ಇಲ್ಲ ಸರ್. ನಿಲ್ಲಿಸಿದರೆ ನಾನು ಖಂಡಿತ ಸತ್ತುಹೋಗುತ್ತೇನೆ’ ಎನ್ನುತ್ತಾ ನನ್ನ ಬೆರಳುಗಳ ಜೊತೆ ತನ್ನ ಬೆರಳುಗಳನ್ನು ಸೇರಿಸಿ ಆಟವಾಡುತ್ತಿದ್ದುದನ್ನು ನಿಲ್ಲಿಸಿ ಮೆತ್ತಗೆ ನನ್ನ ಅಂಗೈಯನ್ನು ಅಮುಕಿದಳು.

ನಾನು ಏನೂ ಆಡಲಿಲ್ಲ. ‘ಟ್ಯೂಶನ್ ಮುಂದುವರಿಸುವ’ ಎಂದು ಆ ದಿನದ ‘ಪೀರಿಯಡ್’ನ್ನು ಮುಗಿಸಿ ‘ಎಲ್ಲಿ ಒಂದು ಚೂರು ಪೇಪರ್ ಕೊಡು’ ಎಂದೆ. ಇವಳು ಗಾಬರಿಯಲ್ಲಿ ಪೇಪರ್ ಪೀಸು ಕೊಟ್ಟಳು. ಅದರಲ್ಲಿ ‘ಐ ಲವ್ ಯೂ ಟೂ’ ಎಂದು ಬರೆದು ನನ್ನ ತುಟಿಗಳನ್ನು ಅದಕ್ಕೆ ತಾಗಿಸಿ ಇವಳ ಕೈಯಲ್ಲಿಟ್ಟು ಬಂದೆ. ಮರುದಿನದಿಂದ ನಮ್ಮಿಬ್ಬರಲ್ಲಿ ಸಣ್ಣ ಪುಟ್ಟ ಪತ್ರಗಳು ಆಚೆಯಿಂದ ಈಚೆಗೆ, ಈಚೆಯಿಂದ ಆಚೆಗೆ ರವಾನೆಯಾಗತೊಡಗಿದುವು. ನಿಧಾನವಾಗಿ ಆ ಪತ್ರಗಳು ತಮ್ಮ ಗಾತ್ರವನ್ನು ಹಿಗ್ಗಿಸಿಕೊಂಡಾಗ ಇಬ್ಬರಲ್ಲೂ ಯಾವಾಗ ಪರಸ್ಪರ ನೋಡುವುದು, ಮಾತನಾಡುವುದು, ಸಾಧ್ಯವಾದರೆ ಸ್ಪರ್ಶಿಸುವುದು ಎನ್ನುವುದೆಲ್ಲ ಸಹಜವೆಂಬಂತೆ ಮುಂದೆ ಬಂದುವು.

ಇದರಿಂದ ನಾನು ಪ್ರತಿದಿನ ಟ್ಯೂಶನ್ ಕ್ಲಾಸಿಗೆ ಬಂದಾಗ ಮೊದಲಿನ ಗಾಂಭೀರ್ಯವನ್ನು ಇಟ್ಟುಕೊಳ್ಳುವುದು ಕಡಿಮೆಯಾಯಿತು. ‘ಬೇಡ ಬೇಡ’ ಎನ್ನುತ್ತಲೇ ಇವಳು ಕೊಡುತ್ತಿದ್ದ ಕಾಫಿ, ಆಮೇಲೆ ಕಾಫಿಯ ಜೊತೆ ತಿಂಡಿಯನ್ನೂ ಮೆಲ್ಲ ಹತ್ತಿದೆ. ರಾಮಣ್ಣ ಶೆಟ್ಟರಿಗೆ ನಾನು ಎಂದರೆ ಸಾಕ್ಷಾತ್ ದೇವರ ಅವತಾರ ಎಂಬ ಭಾವ ಆಗಲೇ ಬೆಳೆದಿತ್ತು. ಈ ಸಲ ಪರೀಕ್ಷೆಯಲ್ಲಿ ತನ್ನ ಮಗಳು ಖಂಡಿತ ಪಾಸಾಗಿಯೇ ಆಗುತ್ತಾಳೆ ಎಂದು ಅವರು ಸಂಭ್ರಮಿಸಿದ್ದರು. ಆದರೆ ಅವರ ಪತ್ನಿ ವೆಂಕಮ್ಮನಿಗೆ ಮಗಳಲ್ಲಿ ಏನೋ ಬದಲಾವಣೆ ಕಂಡುಬಂದಂತಾಗಿತ್ತು ಎಂದು ಕಾಣುತ್ತದೆ. ಆಕೆಗೆ ಮಗಳು ತನ್ನಿಂದೇನೋ ಮುಚ್ಚಿಡುತ್ತಿದ್ದಾಳೆ ಎಂದು ಅನಿಸಿ, ಒಂದು ದಿನ ಇವಳು ಕಾಲೇಜಿಗೆ ತೆರಳಿದ ಹೊತ್ತಿನಲ್ಲಿ ಅವರು ಇವಳ ರೂಮಿನಲ್ಲಿದ್ದ ಪುಸ್ತಕಗಳನ್ನು ಇಡುವ ಸೆಲ್ಫನ್ನು ತಡಕಾಡಿದರಂತೆ. ಆಗ ಅಲ್ಲಿ ಕೆಲವು ಪತ್ರದ ಮಾದರಿಯ ಬರೆಹಗಳ ‘ಬಂಡಲ್’ ಅನ್ನು ಇವಳು ಜೋಪಾನವಾಗಿರಿಸಿದ್ದನ್ನು ಕಂಡರಂತೆ. ಕುತೂಹಲದಿಂದ ವೆಂಕಮ್ಮ ಅದನ್ನು ಬಿಡಿಸಿ ನೋಡಿದಾಗ ಅದು ಇಂಗ್ಲಿಷಿನಲ್ಲಿದ್ದುದರಿಂದ ಏನು ಎಂದು ಆಕೆಗೆ ಹೊಳೆಯಲಿಲ್ಲ. ಹೊರಗೆ ಹೋಗಿದ್ದ ಗಂಡ ಮನೆಗೆ ಬಂದು ಊಟ ತೀರಿಸಿ ಕಾಲುಚಾಚಿ ವಿಶ್ರಾಂತಿ ತೆಗೆದುಕೊಳ್ಳುವ ಹೊತ್ತಿನಲ್ಲಿ ಅವರ ಬಳಿ ಬಂದ ವೆಂಕಮ್ಮ ‘ಇದು ಎಂಥಾದ್ದು ನೋಡಿ ನಿಮ್ಮ ಮಗಳದ್ದು?’ ಎಂದು ಆ ಪತ್ರಗಳ ಬಂಡಲನ್ನು ಗಂಡನ ಕೈಯಲ್ಲಿಟ್ಟರಂತೆ.

## ಕಳೆದ ಸಂಚಿಕೆಯಲ್ಲಿ...



ಆತಂಕದೊಂದಿಗೆ ಪೊಲೀಸ್ ಠಾಣೆಯ ಮೆಟ್ಟಿಲು ತುಳಿದ ಶ್ರೀನಿವಾಸರಾಯರಿಗೆ ಅಲ್ಲಿ ಪೊಲೀಸ್ ಅಧಿಕಾರಿಯ ರೂಪದಲ್ಲಿ ಎದುರಾದುದು ತಮ್ಮ ಒಂದು ಕಾಲದ ಶಿಷ್ಯ! ಗುರುಶಿಷ್ಯರ ಮಾತುಕತೆಯ ನಡುವೆ, ರಾಯರ ಆತಂಕ ಸ್ವಲ್ಪಸ್ವಲ್ಪವೇ ಕರಗತೊಡಗಿತು. ಮಾತಿನ ನಡುವೆ ಅವರು ಉದ್ಯೋಗವನ್ನು ಬದಲಿಸಬೇಕಾದ ಸಂದರ್ಭ, ಅದಕ್ಕೆ ಕಾರಣವಾಗಿ ಪರಿಣಮಿಸಿದ ಪ್ರೇಮ ಪ್ರಕರಣಗಳ ವಿವರಗಳನ್ನೂ ಶ್ರೀನಿವಾಸರಾಯರು ನೆನಪಿಸಿಕೊಂಡರು. ಬೆದರಿಕೆಯ ಪ್ರಕರಣವನ್ನು ಬಗೆಹರಿಸುವುದಾಗಿ ಹೇಳಿದ ಪೊಲೀಸರ ಅಭಯದ ಮಾತುಗಳೊಂದಿಗೆ ಮನೆಗೆ ಮರಳಿದರೂ, ರಾಯರ ಪತ್ನಿ ಸರೋಜಮ್ಮನವರಿಗೆ ಆತಂಕ ಬಗಹರಿಯಲಿಲ್ಲ. ಆ ಆತಂಕದ ನಡುವೆಯೂ ತಾರುಣ್ಯದ ದಿನಗಳ ಟ್ಯೂಷನ್ನು ಹಾಗೂ ಮನೆಪಾಠದ ನೆಪದಲ್ಲಿ ನಡೆದ ಪ್ರೇಮ ಪಾಠದ ನೆನಪುಗಳು ಎದುರಿಗೆ ಬಂದವು.

ರಾಮಣ್ಣ ಶೆಟ್ಟರು ದಿಂಬಿನಲ್ಲಿ ತಲೆಇಟ್ಟು ಮಲಗಿದ್ದವರು, ಅಲ್ಲಿಂದ ನಿಧಾನ ಎದ್ದು ಆ ಪತ್ರಗಳ ಬಂಡಲನ್ನು ಬಿಡಿಸಿದಾಗ, ಪ್ರತಿಪತ್ರದಲ್ಲೂ ‘ಮೈ ಡಿಯರ್ ಸರೋಜ’ ಎಂದು ಬರೆದದ್ದು ಕಾಣಿಸಿತು. ದಡಕ್ಕನೆ ಎದ್ದು ಕುಳಿತ ಅವರು ನಾಲ್ಕಾರು ಪತ್ರಗಳನ್ನು ಸಾವಧಾನವಾಗಿ ಓದಿ ಸಣ್ಣಗೆ ‘ಛಿ! ಛಿ!’ಕಾರ ಹಾಕಿ ಇದಿರು ಕುಳಿತಿದ್ದ ಹೆಂಡತಿ ಮುಖ ನೋಡಿ ‘ಎಲ್ಲಾ ಹಾಳಾಯಿತು ವೆಂಕಮ್ಮ’ ಎಂದರಂತೆ.

ವೆಂಕಮ್ಮ ‘ಏನಾಯ್ತು ಹೇಳಿ’ ಎಂದಾಗ, ಕೋಪೋದ್ರಿಕ್ತರಾದ ರಾಮಣ್ಣಶೆಟ್ಟರು ‘ನಮ್ಮ ಹುಡುಗಿ ಮತ್ತು ಅವಳ ಮೇಷ್ಟ್ರ ಪ್ರೇಮ ಪತ್ರಗಳು ಇವು! ಅವಳು ಪರೀಕ್ಷೆಯಲ್ಲಿ ಫೇಲಾಗಿ ಹೋಗುತ್ತಿದ್ದರೂ ಚಿಂತೆಯಿದ್ದಿಲ್ಲ! ಇದು ಮಾತ್ರ ಬೇಡ ಇತ್ತು’ ಎಂದರಂತೆ.

ಗಂಡ ಹೆಂಡತಿ ಇಬ್ಬರೂ ಸಾಕಷ್ಟು ತಲೆ ಚಚ್ಚಿಕೊಂಡ ಬಳಿಕ ಅಂದಿನಿಂದಲೇ ಸರೋಜಳ ಟ್ಯೂಶನ್ ಕ್ಲಾಸ್ ನಿಲ್ಲಿಸುವುದು ಎಂಬ ನಿರ್ಧಾರಕ್ಕೆ ಬಂದರಂತೆ. ಆದರೆ ಯಾಕೆ, ಏನು ಎಂದು ಮಗಳಿಗೆ ಹೇಳುವುದಲ್ಲ! ನಾಳೆ ಸಂಜೆ ಕಾಲೇಜಿನ ಪ್ರಾಂಶುಪಾಲರ ಮನೆಗೆ ಹೋಗಿ ‘ಸರ್ ಹೀಗೆಲ್ಲ ಆಗಿದೆ. ನೀವೇ ಇದಕ್ಕೆ ಪರಿಹಾರ ಹೇಳಬೇಕು’ ಎಂದು ಹೋಗಿ ವಿನಂತಿಸುವುದು ಎಂದು ಗಂಡ ಹೆಂಡತಿ ಇಬ್ಬರೂ ನಿಶ್ಚಯಿಸಿದರಂತೆ. ಆ ದಿನ ಸಂಜೆ ಕಾಲೇಜು ಮುಗಿಸಿ ಇವಳು ಮನೆಗೆ ಬಂದಾಗ, ಮನೆಯಲ್ಲಿ ಎಂದಿನ ಸಂಭ್ರಮ ಇರಲಿಲ್ಲವಂತೆ. ವೆಂಕಮ್ಮ ಮಗಳನ್ನು ಮಾತನಾಡಿಸಲು ಹೋಗದೆ ಇದ್ದುದರಿಂದ ಇವಳು ನನಗೆ ಕಾಫಿ ತಯಾರಿಸಲು ಸಿದ್ಧತೆ ನಡೆಸುತ್ತಿದಾಗ ಅಲ್ಲಿಗೆ ಧಾವಿಸಿ ಬಂದ ವೆಂಕಮ್ಮ, ‘ನೀನು ಟ್ಯೂಶನ್ ತಗೊಂಡದ್ದು ಸಾಕು ಎನ್ನುತ್ತಾರೆ ನಿನ್ನಪ್ಪ. ಯಾಕೆ ಏನು ಎಂದು ನನಗೆ ಗೊತ್ತಿಲ್ಲ. ಬೇಕಾದರೆ ಅಪ್ಪನನ್ನೇ ಕೇಳು’ ಎಂದರಂತೆ. ಇವಳಿಗೆ ತಕ್ಷಣ ತಮ್ಮ ಪ್ರೇಮ ಪ್ರಕರಣ ಅಪ್ಪ ಅಮ್ಮನಿಗೆ ಗೊತ್ತಾಯಿತು ಎಂದು ಆತಂಕವಾಯ್ತಂತೆ. ಆಕೆ ತನ್ನ ಬೆಡ್‌ರೂಮಿಗೆ ಹೋಗಿ ಬಾಗಿಲು ಹಾಕಿ ಹಾಸಿಗೆಯಲ್ಲಿ ಉದ್ದಕ್ಕೂ ಬಿದ್ದು ಮುಸಿ ಮುಸಿ ಅಳತೊಡಗಿದಳಂತೆ.

ಆದರೆ ನಾನು ಎಂದಿನ ಹಾಗೆ ಸರಿಯಾದ ಸಮಯಕ್ಕೆ ರಾಮಣ್ಣ ಶೆಟ್ಟರ ಮನೆ ಬಾಗಿಲಿಗೆ ಬಂದೆ. ಕಾಲಿಂಗ್ ಬೆಲ್ ಒತ್ತಿದೆ. ಯಾವಾಗಲೂ ಬಾಗಿಲು ತೆಗೆದು ಸ್ವಾಗತಿಸುವ ಇವಳ ಬದಲು ರಾಮಣ್ಣ ಶೆಟ್ಟರೇ ಬಾಗಿಲು ತೆರೆದು ‘ಆಕೆಗೆ ಮೈ ಹುಷಾರಿಲ್ಲ! ಟ್ಯೂಶನ್ ಬೇಡ’ ಎಂದರು.

‘ಏನಾಗಿದೆ ಅವಳಿಗೆ? ಚೆನ್ನಾಗಿದ್ದಳಲ್ಲ ಕ್ಲಾಸಿನಲ್ಲಿ?’ ಎಂದು ನಾನು ಪ್ರಶ್ನಿಸಿದ್ದಕ್ಕೆ ಶೆಟ್ಟರು ನನ್ನನ್ನು ಒಳಗೆ ಕರೆಯದೆ ಬಾಗಿಲಲ್ಲಿ ಅಡ್ಡ ನಿಂತು ‘ಏನಾಗಿದೆ ಎಂದು ನಿಮಗೂ ಅವಳಿಗೂ ಗೊತ್ತು’ ಎಂದು ಹೇಳಿ, ‘ನಾಳೆಯಿಂದ ನೀವು ನಮ್ಮ ಮನೆಬಾಗಿಲಿಗೆ ಬರುವುದು ಬೇಡ’ ಎಂದು ರೋಷದಿಂದ ದಢಾರನೆ ಬಾಗಿಲು ಮುಚ್ಚಿದ್ದರು.

ಆ ದಿನ ರಾತ್ರೆ ಸರೋಜಳನ್ನು ಯಾರೂ ಪ್ರಶ್ನಿಸಲಿಲ್ಲ. ಅವಳೂ ಯಾರಲ್ಲೂ ಏನು ಎಂತು ಎಂದು ಕೇಳಲಿಲ್ಲ. ಮರುದಿನ ಕಾಲೇಜಿಗೆ ಹೋಗುವುದಿಲ್ಲ ಎಂದು ಆಕೆ ಮನೆಯಲ್ಲೇ ಉಳಿದಳಂತೆ. ‘ಹೋಗು’ ಎಂದು ಅವಳನ್ನು ಅವಳ ಅಪ್ಪ ಅಥವಾ ಅಮ್ಮನೂ ಒತ್ತಾಯಿಸಲೂ ಇಲ್ಲ ಎನ್ನುವುದು ಆಮೇಲೆ ನನಗೆ ತಿಳಿಯಿತು.

ಮರುದಿನ ಸಂಜೆ ರಾಮಣ್ಣ ಶೆಟ್ಟರು ಕಾಲೇಜಿನ ಪ್ರಾಂಶುಪಾಲರ ಮನೆಗೆ ಹೋಗಿ ‘ಸರ್, ನನ್ನ ಮಗಳ ಮತ್ತು ಅವಳ ಮೇಷ್ಟ್ರ ನಡುವೆ ಇಂಥಿಂಥದ್ದೆಲ್ಲ ನಡೆದಿದೆ. ನಾನು ನಾಳೆ ಯಿಂದ ನಮ್ಮ ಹುಡುಗಿಯನ್ನು ಕಾಲೇಜಿಗೆ ಕಳುಹಿಸಬಾರದು ಎಂದು ನಿಶ್ಚಯಿಸಿದ್ದೇನೆ’ ಎಂದರಂತೆ.

ಪ್ರಾಂಶುಪಾಲರು ಯಾವ ಮಾತೂ ಆಡದೆ ಗಂಭೀರವಾಗಿ ಆ ಪತ್ರಗಳನ್ನೆಲ್ಲ ನೋಡದೇ ಅವುಗಳನ್ನು ಸುರುಳಿ ಸುತ್ತಿ ಮರಳಿ ರಾಮಣ್ಣ ಶೆಟ್ಟರ ಕೈಯಲ್ಲಿಟ್ಟು, ‘ಇದು ಆಗಬಾರದಿತ್ತು ಶೆಟ್ರೇ. ಬಟ್ ಆತ ತುಂಬಾ ಸಭ್ಯ ಅಂತ ನಾನು ತಿಳಿದುಕೊಂಡಿದ್ದೇನೆ. ಅಷ್ಟೇ ಅಲ್ಲ, ಒಳ್ಳೆ ಲೆಕ್ಚರರ್ ಕೂಡಾ ಎಂದು ನನಗೆ ಗೊತ್ತು’ ಎಂದು ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನಾಡಿ, ‘ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದಾರೆ ಎಂದಮೇಲೆ, ಬೇಡ ಎನ್ನುವ ಅಧಿಕಾರ ನಮಗಿಲ್ಲ ಶೆಟ್ಟರೇ! ಹುಡುಗಿಗೆ ಹದಿನೆಂಟು ಆಗಲಿ. ಮದುವೆ ಮಾಡಿಸಿಬಿಡಿ